


ಎನ್. ಜಗನ್ನಾಥ ಪ್ರಕಾಶ್

# ಪೌರಾಣಿಕ ಪಾತ್ರಗಳ ರಾಘವೇಂದ್ರ ರಾವ್

ನಿರ್ದಿಷ್ಟ ಪಾತ್ರಗಳಿಗೆ ಸೀಮಿತವಾಗದೆ, ಎಲ್ಲ ಪಾತ್ರಗಳಿಗೆ ನ್ಯಾಯ ಒದಗಿಸಿ ರಂಗಭೂಮಿ ಹಾಗೂ ಚಲನಚಿತ್ರ ಎರಡೂ ಕ್ಷೇತ್ರಗಳಲ್ಲಿ ಅಚ್ಚಳಿಯದ ಸಾಧನೆ ಮಾಡಿದ ಅಪರೂಪದ ಕಲಾವಿದ ಬೇಲೂರು ರಾಘವೇಂದ್ರ ರಾವ್.

ಹೊಯ್ಸಳರ ಶಿಲ್ಪ ಸೌಂದರ್ಯದ ಕಾಶಿ ಎನ್ನಿಸಿಕೊಂಡ ಬೇಲೂರಿನಲ್ಲಿ ಹುಟ್ಟಿ ಬೆಳೆದ ರಾಘವೇಂದ್ರ ರಾಯರು ಕಲೆಯಲ್ಲಿ ಆಸಕ್ತಿ ಇದ್ದ ತಂದೆಯಿಂದ ಬಣ್ಣದ ಬದುಕಿನಲ್ಲೇ ನೆಲೆ ಕಂಡುಕೊಳ್ಳಲು ನಿರ್ಧರಿಸಿ ಏಳುಬೀಳುಗಳ ನಡುವೆ ತಮ್ಮದೇ ಗುರುತುಗಳನ್ನು ಮೂಡಿಸಿದವರು.

ಸರ್ಕಾರಿ ಉದ್ಯೋಗದಲ್ಲಿದ್ದ ತಂದೆ ಮನೆಮಂದಿಗೆ ಯಾವುದರಲ್ಲೂ ಕಡಿಮೆ ಮಾಡಿರಲಿಲ್ಲ ಕಂದಾಯ ಇಲಾಖೆಯ ನೌಕರ ಅನಂತರಾಮ ರಾವ್ ತಮಗಿದ್ದ ನಾಟಕ ಆಸಕ್ತಿಯನ್ನು ಮಕ್ಕಳಿಗೂ ಹುಟ್ಟಿಸಿದ್ದರು. ಅವರ ಅಕಾಲಿಕ ನಿಧನ ಇಡೀ ಕುಟುಂಬಕ್ಕೆ ಸಂಕಷ್ಟ ತಂದಿತು. ತಂದೆ ಕಾಲವಾದ ಸ್ವಲ್ಪ ಕಾಲದಲ್ಲೇ ತಾಯಿ ಕಣ್ಮುಚ್ಚಿದಾಗ ರಾಘವೇಂದ್ರರಾಯರಿಗೆ ದೊಡ್ಡ ಆಘಾತ.

ಸಂಸಾರದ ಹಿರಿಯನಾಗಿ ರಾಘವೇಂದ್ರ ಮನೆ ಹೊಣೆ ಜೊತೆಗೆ ಓದು ಬರಹ ಕಲಿಯಬೇಕಾದ ಅನಿವಾರ್ಯ ಸನ್ನಿವೇಶ ಎದುರಿಸಬೇಕಾಯಿತು. ಇದೇ ಸಂದರ್ಭದಲ್ಲಿ ಇವರ ಕುಟುಂಬ ಬೇಲೂರಿನಿಂದ ಮೈಸೂರಿಗೆ ಸ್ಥಳಾಂತರಗೊಂಡಿತು. ಮೈಸೂರು ಮರಿಯಪ್ಪ ಸ್ಕೂಲ್‌ನಲ್ಲಿ ಓದುತ್ತಿದ್ದಾಗ ನಾಟಕಾಸಕ್ತಿ ಮತ್ತೆ ಸೆಳೆಯಿತು. ಹವ್ಯಾಸಿಗಳ ತಂಡವಾಗಿದ್ದ ಲಿಟರರಿ ಅಂಡ್ ಡ್ರಮ್ಯಾಟಿಕ್ ಸಂಘಕ್ಕೆ ಇವರು ಕಾಲಿಟ್ಟರು.

ನಾಟಕ ನೋಡಿ ಅಭ್ಯಾಸವಿದ್ದ ರಾಯರನ್ನು ಕಲಾಸಕ್ತ ಸಂಘದ ಸೂತ್ರಧಾರ ಆನಂದರಾಯರು 'ಲವ ಕುಶ' ನಾಟಕಕ್ಕೆ ಆಯ್ಕೆ ಮಾಡಿದರು. ನಾಟಕದಲ್ಲಿ ಅವರ ಪಾತ್ರ 'ಲವ'ನದು. ಇವರ ಅಭಿನಯ ಎಲ್ಲರಿಗೂ ಇಷ್ಟವಾಯಿತು. ಮೈಸೂರು ಸಾಂಸ್ಕೃತಿಕವಾಗಿ ಸದಾ ಚಟುವಟಿಕೆಗಳ ಊರು. ನಾಡಿನ ಬಹುತೇಕ ಕಲಾವಿದರು ಸಂಪರ್ಕದಲ್ಲಿದ್ದ ಮೈಸೂರಿನಲ್ಲಿ ರಾಯರೂ ನೆಲೆಯೂರಿದ್ದರು. ನಾಟಕ ರಂಗದಲ್ಲಿಯೇ ಬದುಕು ಕಟ್ಟಿಕೊಳ್ಳಲು ಮನಸ್ಸು ಮಾಡಿದ್ದರು.

ನಾಟಕ ಸಾರ್ವಭೌಮ ಟೈಗರ್ ವರದಾಚಾರ್ ತೀರಿಕೊಂಡ ಸಂದರ್ಭದಲ್ಲಿ ಅವರ ನೆನಪಿನಲ್ಲಿ ರತ್ನಾವಳಿ ನಾಟಕ ಸಂಘ ಅಸ್ತಿತ್ವಕ್ಕೆ ಬಂದಿತು. ವರದಾಚಾರ್ ನಾಟಕ ಮಂಡಲಿ ಅಭಿನಯಿಸುತ್ತಿದ್ದ ನಾಟಕಗಳನ್ನೇ ಹೊಸ ಸಂಘ ರಂಗದ ಮೇಲೆ ತಂದಿತು. ಆಗ ಪ್ರದರ್ಶನಗೊಂಡ 'ರತ್ನಾವಳಿ', 'ನಿರುಪಮಾ', 'ವಿಷ್ಣುಲೀಲೆ', 'ಶಾಕುಂತಲ', 'ಮಹಾಭಾರತ' ಮುಂತಾದ ನಾಟಕಗಳಲ್ಲಿ ರಾಯರಿಗೆ ಮುಖ್ಯ ಪಾತ್ರಗಳಿದ್ದವು. ಒಂದೊಂದು ನಾಟಕಗಳಲ್ಲಿ ಎರಡೆರಡು ಪಾತ್ರಗಳನ್ನೂ ಅವರು ನಿರ್ವಹಿಸಿದ್ದುಂಟು.

ಉತ್ಸಾಹದಿಂದ ತಲೆ ಎತ್ತಿದ್ದ 'ರತ್ನಾವಳಿ' ಕಂಪನಿ ಬಹಳ ದಿನ ಮುಂದುವರೆಯಲಿಲ್ಲ. ಆಗ